Revenue Inspector in Arasikere Taluk.

Q.—478. Sri K. PANCHAKSHARIAH (Arsikere).—

Will the Government be pleased to state .—

the number of Revenue Inspectors working in Arsikere Taluk for more than three years ?

A.—Sri Kadidal MANJAPPA (Minister for Revenue and Public Works).—

One.

ಶ್ರೀ ಕೆ. ಪಂಚಾಕ್ಷರಯ್ಯ.—ತಾವು ಉತ್ತರದಲ್ಲಿ ತಿಳಿಸಿರುವ ಒಬ್ಬರು ಅರಶೀಕೆರೆ ತಾಲ್ಲೂಕು ಯಾವ ನರ್ಮಲ್‌ನಲ್ಲಿದ್ದಾರೆ?

ಶ್ರೀ ಕಡಿದಾಳ್ ಮಂಜಪ್ಪ.—ನೋಟೀಸ್.

ಶ್ರೀ ಕೆ. ಪಂಚಾಕ್ಷರಯ್ಯ.—ಅವರು ಅಲ್ಲೇ ಎಷ್ಟು ವರ್ಷಗಳಿಂದ ಇದ್ದಾರೆ?

ಶ್ರೀ ಕಡಿದಾಳ್ ಮಂಜಪ್ಪ - 3 ವರ್ಷಗಳಿಂದ ಇದ್ದಾರೆ. ಈಗ ಅವರನ್ನು ಬೇರೆ ಕಡೆಗೆ ವರ್ಗಾಯಿಸಲು ಆಜ್ಞೆಯಾಗಿದೆ.

Mr. SPEAKER.—The object is aleady fulfilled.

Grant of Land for Coffee and Cardamom cultivation.

Q.—560. Sri G. PUTTASWAMY (Chikmagalur-Mudigere—Scheduled Castes).—

Will the Government be pleased to state :—

whether the Amildars and the Sub-Division Officers of the Revenue Department have been empowered to grant lands for coffee and cardamom cultivation ?

A.—Sri Kadidal MANJAPPA (Minister for Revenue and Public Works).—

No. Rules regarding grant of lands for coffee and cardamom cultivation are governed by rules under Appendix 'N' of the rules under the Land Revenue Code.

ಶ್ರೀ ಜಿ. ಪುಟ್ಟಸ್ವಾಮಿ.—ತಮ್ಮ ಉತ್ತರಕ್ಕನುಸಾರವಾಗಿ ತಾವೀಗ ಅವರಿಗೆ ಈ ಜಮೀನುಗಳನ್ನು ಕೊಡಲು ಅಧಿಕಾರ ಕೊಟ್ಟಿದ್ದೀರಾ ?

ಶ್ರೀ ಕಡಿದಾಳ್ ಮಂಜಪ್ಪ.—ರೂಲ್ಸು ಪ್ರಕಾರ ಅವರು ಅಧಿಕಾರ ಚಲಾಯಿಸುತ್ತಿದ್ದಾರೆ.

ಶ್ರೀ ಜಿ. ಪುಟ್ಟಸ್ವಾಮಿ.—ಆ ರೂಲ್ಸುಗಳಲ್ಲಿ ಅವರಿಗೆ ಅಧಿಕಾರ ಕೊಟ್ಟಿದ್ದೀರಾ ?

ಶ್ರೀ ಕಡಿದಾಳ್ ಮಂಜಪ್ಪ.—ಮಾನ್ಯ ಸದಸ್ಯರು ಕಾನೂನು ಓದಿ ನೋಡಿದರೆ ಗೊತ್ತಾಗುತ್ತದೆ.

ಶ್ರೀ ಜಿ. ಪುಟ್ಟಸ್ವಾಮಿ.—ಹಾಗಾದರೆ ಮೂರು ವರ್ಷಗಳಿಂದಲೂ ಈ ಜಮೀನುಗಳಿಗೆ ದರಖಾಸ್ತುಗಳು ಮಂಜೂರಾಗದೆ ಇರುವ ವಿಚಾರ ತಮ್ಮ ಗಮನಕ್ಕೆ ಬಂದಿದೆಯೆ ?

ಶ್ರೀ ಕಡಿದಾಳ್ ಮಂಜಪ್ಪ.—ಕೆಲವು ನಿರ್ದಿಷ್ಟವಾದ ನಿದರ್ಶನಗಳು ಮಾತ್ರ ನಮ್ಮ ಸರ್ಕಾರದವರ ಗಮನಕ್ಕೆ ಬಂದಿವೆ.

ಶ್ರೀ ಜಿ. ಪುಟ್ಟಸ್ವಾಮಿ.—ಈ ಬಗ್ಗೆ ಕಾಲವಿಳಂಬ ಆಗದಂತೆ ಈ ದರಖಾಸ್ತುಗಳನ್ನು ವಿಲೇ ಮಾಡಲು ಅಮಲ್ದಾರರಿಗೂ ಮತ್ತು ನಬ್-ಡಿವಿಜಿ ಅಧಿಕಾರಿಗಳಿಗೂ ಅಧಿಕಾರ ಕೊಡುವುದು ನೂಕ್ತವಲ್ಲವೇ ?

ಶ್ರೀ ಕಡಿದಾಳ್ ಮಂಜಪ್ಪ.—ಈ ಕಾಫಿ ಮತ್ತು ಟೀ ವ್ಯವಸಾಯದ ಬಗ್ಗೆ ಕಡಮೆ ವಿಸ್ತೀರ್ಣದ ಜಮೀನುಗಳನ್ನು ಕೊಡುವುದಕ್ಕಾಗುವುದಿಲ್ಲ. ಅಮಲ್ದಾರರಿಗೆ ಕಾನೂನು ರೀತ್ಯಾ ಎರಡು ಎಕರೆ ತರಿ ಮತ್ತು ನಾಲ್ಕು ಎಕರೆ ಖುಷ್ಕಿ ಜಮೀನು ಮಾತ್ರ ಕೊಡಬಹುದೆಂತ ಇದೆ.

ಶ್ರೀ ಜಿ. ಪುಟ್ಟಸ್ವಾಮಿ.—ಹಾಗೆ ಇವರನ್ನು ಹೆಚ್ಚಿಗೆ ಕೇಳುವುದು ನೂಕ್ತವಲ್ಲವೆಂದೇ ನಾನು ಕೇವಲ ಬಡವರಾಗಿರತಕ್ಕವರಿಗೆ ಮಾತ್ರ ಎರಡು ಎಕರೆ ಕಾಫಿ ಮತ್ತು ಐದು ಎಕರೆ ಏಲಕ್ಕಿ ವ್ಯವಸಾಯಕ್ಕೆ ಕೊಡುವಂತೆ ಮಾಡುವುದು ಒಳ್ಳೆಯದಲ್ಲವೇ ? ಏನು ಕಷ್ಟವಿದೆ ?

ಶ್ರೀ ಕಡಿದಾಳ್ ಮಂಜಪ್ಪ.—ತಮ್ಮ ಪ್ರಶ್ನೆಯನ್ನು ಪರಿಶೀಲನೆ ಮಾಡುತ್ತೇವೆ.

ಶ್ರೀ ಜಿ. ಪುಟ್ಟಸ್ವಾಮಿ.—ಈ ಕಾಫಿ ಮತ್ತು ಏಲಕ್ಕಿ ವ್ಯವಸಾಯ ಬಹಳ ಕಷ್ಟಕರವಾದ್ದರಿಂದ, ಹೆಚ್ಚಿನ ಲಾಗೋಡಿರುವುದರಿಂದ ಜಾಸ್ತಿ ಕೊಡುವುದಕ್ಕೆ ಮೊದಲು ಹೀಗೆ ಕಡಮೆಯಾಗಿ ಕೊಟ್ಟು ಕ್ರಮೇಣ ಜಾಸ್ತಿ ಮಾಡಲು ಅನುಕೂಲವಾಗುವುದಿಲ್ಲವೇ ಎಂಬ ಅಂಶವನ್ನು ನಾನೀಗ ಕೇಳುತ್ತಿದ್ದೇನೆ.

ಶ್ರೀ ಕಡಿದಾಳ್ ಮಂಜಪ್ಪ.—ಆ ವಿಚಾರವನ್ನು ಪರಿಶೀಲನೆ ಮಾಡುವುದಾಗಿ ಆಗಲೇ ಉತ್ತರ ಕೊಟ್ಟಿದ್ದೇನೆ.

National Extension Scheme Block in Tiptur Taluk (opening).

Q.—230. Sri T. G. THIMMEGOWDA (Tiptur).—

Will the Government be pleased to state :—

whether they intend to establish a N.E.S. Block in Tiptur Taluk ?

A.—Dr. R. NAGAN GOWDA (Minister for Agriculture).—

As early as possible.

ಶ್ರೀ ಟಿ. ಜಿ. ತಿಮ್ಮೇಗೌಡ.—1956ನೆಯ ಸಾಲಿನಲ್ಲಿ ತಿಪಟೂರಿಗೆ ಈ ರಾಷ್ಟ್ರೀಯ ವಿಸ್ತರಣಾ ಯೋಜನೆಯನ್ನು ಕೊಡುತ್ತೀರಾ :

ಡಾ॥ ಆರ್. ನಾಗನಗೌಡ.—ದ್ವಿತೀಯ ಪಾಂಚವಾರ್ಷಿಕ ಯೋಜನೆಯಲ್ಲಿ ನಮಗೆ 98 N.E.S. ಬ್ಲಾಕ್‌ಗಳು ಬರುತ್ತವೆ. ಆಗ್ಗೆ ಇನ್ನೂ ಮಿಕ್ಕ ತಾಲ್ಲೂಕುಗಳಿಗೆ N.E.S. ಬ್ಲಾಕ್‌ಗಳನ್ನು ಕೊಡುವುದಕ್ಕೆ ಏರ್ಪಾಡು ಮಾಡುತ್ತೇವೆ.